ದಿನಾಂಕ 02-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ 3ನೇ ಪ್ರತಿವಾದಿ ಪರ ವಕೀಲರಿಂದಃ-

| | |
|---|---|
| ನಿಡಿ-54 | ರೆಕಾರ್ಡ್ ಆಫ್ ರೈಟ್ಸ್ ನ ದೃಢೀಕೃತ ನಕಲು |
| ನಿಡಿ-55 | ಇಂಡೆಕ್ಸ್ ಆಫ್ ಲ್ಯಾಂಡ್‌ನ ದೃಢೀಕೃತ ನಕಲು |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಡಿ-54 ಮತ್ತು ನಿಡಿ-55 ಎಂದು ಗುರುತಿಸಲಾಯಿತು. ದಾವೆಯನ್ನು ವಜಾಗೊಳಿಸುವಂತೆ ಕೋರುತ್ತೇನೆ.

ಪಾಟೀ ಸವಾಲು ವಾದಿಗಳ ಪರ ಶ್ರೀ ಎಂ.ಎಸ್.ಎಂ., ವಕೀಲರಿಂದಃ-

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಲಿಖಿತ ಹೇಳಿಕೆ ಸಲ್ಲಿಸುವ ಕಾಲಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಮೂಡಲಯ್ಯರವರಿಗೆ ಸಂಬಂಧಪಟ್ಟ ಆಸ್ತಿಗಳ ದಾಖಲೆಗಳು ಎಂದರೆ ಸರಿ. ಮೂಡಲಯ್ಯ ನನ್ನ ತಾತ. ನಿಡಿ-52 ರಲ್ಲಿ ಪ್ರಮಾಣ ಪತ್ರ ನೀಡಿದ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ನಿಡಿ-52ನ್ನು ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಡಿ-50ರಲ್ಲಿ ಮೂಡಲಯ್ಯ ಬಿನ್ ಮೂಡಲಯ್ಯರವರಿಂದ ಅವರ ಮಕ್ಕಳಾದ ವೆಂಕಟರಮಣಯ್ಯ, ಕೃಷ್ಣಪ್ಪ, ಶಿವಣ್ಣರವರಿಗೆ ವಿಭಾಗದಂತೆ ಮಾತ್ರ ಎಂದು ಬರೆದಿದೆ ಎಂದರೆ ಸರಿ. ವಿಭಾಗ ಪತ್ರ ಯಾವಾಗ ಆಯಿತು ಎಂದರೆ ಸಾಕ್ಷಿಯು ನಿಡಿ-42ರಂತೆ ಡಿಸೆಂಬರ್-1982ರಲ್ಲಿ ಆಗಿದೆ ಎಂದು ನುಡಿಯುತ್ತಾರೆ. 15 ವರ್ಷಗಳ ಕಾಲ ವಿಭಾಗದಂತೆ ಎಂ.ಆರ್ ಮಾಡಿಕೊಳ್ಳಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹಣಕಾಸಿನ ತೊಂದರೆ ಇತ್ತು ಎಂದು ನುಡಿಯುತ್ತಾರೆ. ಎಂ.ಆರ್ ಮಾಡಿಸಲು ಎಷ್ಟು ಹಣಕಾಸು ಬೇಕಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-42 ವಿಭಾಗ ಪತ್ರ

ಆಗಿಲ್ಲದ ಕಾರಣ ನಿಡಿ-50ರಲ್ಲಿ 1982ರ ವಿಭಾಗದಂತೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಆಗಿದೆ ಎಂದು ನುಡಿಯುತ್ತಾರೆ. ನಿಡಿ-42ನ್ನು ಕೇಸಿಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.